ಸಿ.ಸಿ ನಂಬ್ರ: 658 /2024
ಪಿ.ಡಬ್ಲ್ಯೂ : 2

ದಿನಾಂಕಃ 31-07-2025 ರಂದು ಸಾಕ್ಷಿಗೆ ಪ್ರಮಾಣ ವಚನ ಮಾಡಿಸಲಾಗಿದೆ

ಪಾಟೀ ಸವಾಲು: ಆರೋಪಿ ಪರ ಶ್ರೀ ಆರ್. ಕೆ .ಎಮ್ . ವಕೀಲರಿಂದ

1. ಕೃಷ್ಣಯ ಶೆಟ್ಟಿರವರ ಹೋಟೆಲ್ ಸೇಲ್ ಮಾಡಿದ ಬಗ್ಗೆ ಕರಾರು ಮಾಡಿಕೊಂಡಿರುತ್ತಾರೆ. ಹೋಟೆಲ್ ಹೆಸರು ಗಂದರ್ವ ಹೋಟೆಲ್. ಅದನ್ನು ಸುಜಾತರವರ ಹೆಸರಿಗೆ ಮಾರಾಟ ಮಾಡಲಾಗಿರುತ್ತದೆ. ಸುಜಾತರವರು ಖಾನಾಪುರದವರು. ಅವರು ಅಷ್ಟಾಗಿ ಪರಿಚಯ ಇರುವುದಿಲ್ಲ. ಅವರ ಗಂಡ, ಮಗ ಪರಿಚಯ ಇರುತ್ತಾರೆ. ನನಗೆ ಅವರ ಪರಿಚಯ ಮೊದಲು ಇರಲಿಲ್ಲ. ಗಂದರ್ವ ಬಾರ್ ಯಾವ ಸರ್ವೆ ನಂಬರ್ ನಲ್ಲಿ ಇತ್ತು ಎಂದು ಗೊತ್ತಿರುವುದಿಲ್ಲ. ನನಗೆ ಆ ಹೋಟೆಲ್ ನ ಡೋರ್ ನಂಬರ್ ಗೊತ್ತಿರುವುದಿಲ್ಲ.

2. ನಾನು ಸಹಿ ಮಾಡಿದೆ ಎನ್ನಲಾದ ದಾಖಲೆ ಏನೆಂದರೆ ಆರೋಪಿತಳು ಬ್ಯಾಲೆನ್ಸ್ ಕೊಡಬೇಕಿತ್ತು. ಹಾಗಾಗಿ ಕರಾರು ಮಾಡಿಕೊಂಡಿದ್ದು ಎಂದು ನುಡಿಯುತ್ತಾರೆ. ಆ ಕರಾರು ಮಾಡಿಕೊಳ್ಳುವಾಗ ನಾನು ಹೇಳಿದ ಹೋಟೆಲ್ ಕೃಷ್ಣಯ್ಯ ಶೆಟ್ಟಿಯವರ ಹೆಸರಿನಲ್ಲಿ ಇತ್ತು. ಹೋಟೆಲ್ ಬಿಟ್ಟು ಲಾಡ್ಜ್ ಪರ್ನಿಚರ್ ಗಳನ್ನೆಲ್ಲಾ ಮಾಡಿರುತ್ತಾರೆ, ಆದರೆ ದಾಖಲಾತಿಯಲ್ಲಿ ತೋರಿಸಿರುವುದಿಲ್ಲ. ಆ ಹೋಟೆಲ್ ಕೃಷ್ಣಯ್ಯ ಶೆಟ್ಟಿಯವರ ಹೆಸರಿಗೆ ಇತ್ತು ಎಂದು ಹೇಳುವ ಸಲುವಾಗಿ ಯಾವ ದಾಖಲೆ ನೋಡಿರುತ್ತೀರಿ ಎಂದರೆ ಸಾಕ್ಷಿ ಎಲ್ಲಾ ದಾಖಲೆಗಳನ್ನು ನೋಡಿರುತ್ತೇನೆ ಎಂದು ನುಡಿಯುತ್ತಾರೆ.

3. ನಾನು ದಿನಾಂಕ 27-01-2023 ರ ಕರಾರು ಪತ್ರವನ್ನು ನೋಡಿರುತ್ತೇನೆ. ನಾನು ಸಹಿ ಮಾಡಿದ ದಾಖಲೆಯನ್ನು ನೋಡಿರುತ್ತೇನೆ. ಕೃಷ್ಣಯ ಶೆಟ್ಟಿಯವರ ಮಾಲೀಕತ್ವದಲ್ಲಿ ಹೋಟೆಲ್ ಇತ್ತು ಎಂದು ನಾನು ಸಹಿ ಹಾಕುವಾಗ ಇಬ್ಬರೂ ಹೇಳಿರುತ್ತಾರೆ. ನನ್ನನ್ನು ಮಾತುಕತೆಗೆ ಕರೆದಿದ್ದು ಕೃಷ್ಣಯ್ಯ ಶೆಟ್ಟಿ ಹಾಗೂ ಶೇಖರ ಶೆಟ್ಟಿಯವರು ಒಂದು ಕರಾರನ್ನು ಮಾಡುವಾಗ ಅದರಲ್ಲಿ ನಮೂದಿಸುವ ಮೊಬಲಗು ನ್ಯಾಯಯುತವಾದ ಪ್ರತಿಫಲವಾಗಿರಬೇಕು ಎಂದರೆ ಸರಿ.

4. ನಾನು ಸಹಿ ಮಾಡಿದ ಕರಾರು ಪತ್ರವನ್ನು ಉಪ ನೋಂದಾಣಾಧಿಕಾರಿಯವರ ಕಚೇರಿಯಲ್ಲಿ ನೋಂದಾವಣೆ ಆಗಿತ್ತೋ ಎಂದು ನನಗೆ ಗೊತ್ತಿರುವುದಿಲ್ಲ. ಎಷ್ಟು ಮೌಲ್ಯದ ಛಾಪಾ ಕಾಗದದಲ್ಲಿ ಬರೆದಿರುತ್ತಾರೆ ಎಂದು ಗೊತ್ತಿರುವುದಿಲ್ಲ. ನನ್ನ ಪ್ರಕಾರ ಕರಾರಿನಂತೆ ಕೃಷ್ಣಯ್ಯ ಶೆಟ್ಟಿಯವರಿಗೆ 3 ಕೋಟಿ 50 ಲಕ್ಷ ಬರಬೇಕಿತ್ತು.ನಾನು ಈ ಮೊದಲು ಕರಾರಿಗೆ ಸಾಕ್ಷಿ ಮಾಡಿ ಸಹಿ ಹಾಕಿರುವುದಿಲ್ಲ. ನಾನು ಸಹಿ ಹಾಕಿದ ಕರಾರು ಪತ್ರದಲ್ಲಿ ಕ್ರಯ ಪತ್ರದ ಉಲ್ಲೇಖ ಇತ್ತು. ಕೃಷ್ಣಯ್ಯ ಶೆಟ್ಟಿಯವರು ಸುಜಾತ ಶೆಟ್ಟಿಯವರಿಗೆ ಎಲ್ಲಾ ದಾಖಲೆಗಳನ್ನು ಮಾಡಿಕೊಟ್ಟಿದ್ದರು. ಆ ಕ್ರಯ ಪತ್ರಕ್ಕೆ ನಾನು ಸಹಿ ಮಾಡಿರುವುದಿಲ್ಲ. ಆ ಕ್ರಯ ಪತ್ರವನ್ನು ನಾನು ನೋಡಿರುತ್ತೇನೆ. ಕ್ರಯ ಪತ್ರದಲ್ಲಿ ಯಾವೆಲ್ಲಾ ವಸ್ತುಗಳನ್ನು ಮಾರಾಟ ಮಾಡಿರುತ್ತಾರೆ ಅಂತ ತೋರಿಸಲಾಗಿರುತ್ತದೆ ಎಂದರೆ ಸಾಕ್ಷಿ ಗಂದರ್ವ ಬಾರ್ ನ ಕಟ್ಟಡ, ಜಾಗವನ್ನು ನಮೂದಿಸಲಾಗಿರುತ್ತದೆ. ಪೀಠೋಪಕರಣಗಳನ್ನುನಮೂದಿಸಿದ ಬಗ್ಗೆ ನಾನು ನೋಡಿರುವುದಿಲ್ಲ. ಇವರಿಬ್ಬರ ನಡುವೆ ಆದ ವ್ಯವಹಾರಕ್ಕೆ ಸಂಬಂಧಪಟ್ಟಂತೆ ನಾನು ಒಂದೇ ದಾಖಲೆಗೆ ಸಹಿ ಮಾಡಿರುತ್ತೇನೆ. ನನಗೆ ಆ ಕ್ರಯ ಪತ್ರವನ್ನು ಕೃಷ್ಣಯ್ಯ ಶೆಟ್ಟಿಯವರು ತೋರಿಸಿರುತ್ತಾರೆ. ಅದು ಕನ್ನಡ ಭಾಷೆಯಲ್ಲಿ ಇರುತ್ತದೆ.ಅದನ್ನು ನಾನು ಓದಿ ಅರ್ಥ ಮಾಡಿಕೊಂಡಿರುತ್ತೇನೆ.

5. ಕ್ರಯ ಪತ್ರದಲ್ಲಿ ಬಾಕಿ ಬರಬೇಕು ಎಂದು ಬರೆದಿರುವುದಿಲ್ಲ. ಅದರಲ್ಲಿ ಮಾರಾಟದ ಹಣ ಸಂಪೂರ್ಣ ಚುಕ್ತ ಆಗಿದೆ ಎಂದು ಬರೆಯಲಾಗಿದೆ ಎಂದರೆ ಸಾಕ್ಷಿ ನಾನು ನೋಡಿರುವುದಿಲ್ಲ ಎಂದು ನುಡಿಯುತ್ತಾರೆ. ಕ್ರಯ ಪತ್ರದ ಮೇಲೆ ಶುಲ್ಕ ವನ್ನು ಉಪನೋಂದಾಣಾಧಿಕಾರಿಯವರ ಕಚೇರಿಯಲ್ಲಿ ತೆರಬೇಕು ಎಂದರೆ ಸರಿ. ಸ್ಥಿರಾಸ್ತಿಗೆ ಸಂಬಂಧಪಟ್ಟಂತೆ ಕೊಂಡು ಹಾಗೂ ಮಾರಾಟ ಮಾಡಿ ಅನುಭವ ಇರುತ್ತದೆ. ಕ್ರಯ ಪತ್ರದಲ್ಲಿ ನಿಜವಾದ ಪ್ರತಿಫಲ ಕಾಣಿಸಬೇಕು ಎಂದರೆ ಸರಿ, ಇಲ್ಲವಾದರೆ ಸರ್ಕಾರಕ್ಕೆ ವಂಚನೆ ಆಗುತ್ತದೆ ಎಂದರೆ ಸರಿ.

6. ಕ್ರಯ ಪತ್ರದಲ್ಲಿ ಕೃಷ್ಣಯ್ಯ ಶೆಟ್ಟಿಯವರು ನಿಜವಾದ ಮಾರುಕಟ್ಟೆ ಮೌಲ್ಯ ಕಾಣಿಸಿರುವುದಿಲ್ಲ. ಅದಕ್ಕೆ ನಾನು ಸದರಿ ಕ್ರಯ ಪತ್ರ ಅಕ್ರಮ ನಾನು ಸಹಿ ಹಾಕುವುದಿಲ್ಲ ಎಂದು ಹೇಳಿರುವುದಿಲ್ಲ. ಕರಾರಿಗೆ ಸಹಿಯನ್ನು ಹಾಕುವ ಅನಿರ್ವಾಯತೆ ಇರಲಿಲ್ಲ ಎಂದರೆ ಸರಿ. ಸದರಿ ಕರಾರು ಪತ್ರವನ್ನು ನೋಂದಣಿ ಮಾಡಿದರೆ ನಾವು ಮಾಡಿದ ಅಕ್ರಮ ಸರ್ಕಾರಕ್ಕೆ ಗೊತ್ತಾಗುತ್ತದೆ ಎಂದು ಮಾಡಿರುವುದಿಲ್ಲ ಎಂದರೆ ಸಾಕ್ಷಿ ಸುಮ್ಮನಿರುತ್ತಾರೆ. ಕರಾರಿನ ಮೇಲೆ ಮಾಡಿದ ಮೌಲ್ಯ ವನ್ನು ಚಾಪಾ ಕಾಗದದ ಮೇಲೆ ನಮೂದು ಮಾಡಬೇಕು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದುನುಡಿಯುತ್ತಾರೆ.

7. ನಾನು ಸಹಿ ಮಾಡಿದ ಕರಾರಿಗೆ ಸುಜಾತರವರು ಎಂದೂ ಸಹ ಒಪ್ಪಿ ಕೊಂಡಿರುವುದಿಲ್ಲ ಹಾಗೂ ಕರಾರನ್ನು ಮಾಡಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಈ ಕರಾರನ್ನು ಅಕ್ರಮದ ಉದ್ದೇಶಕೋಸ್ಕರ ಕೃಷ್ಣಯ್ಯ ಶೆಟ್ಟಿಯವರು ನಕಲಿಯಾಗಿ ಅವರ ಸಹಿಗಳನ್ನು ಹಾಕಿ ಸೃಷ್ಟಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಿ.ಪಿ.7 ಸುಳ್ಳಾಗಿ ಸೃಷ್ಟಿಸಿದ್ದು ಎಂದರೆ ಸರಿಯಲ್ಲ. ನನಗೆ ಸುಜಾತರವರ ಪರಿಚಯ ಇರುವುದಿಲ್ಲ ಎಂದರೆ ಸರಿಯಲ್ಲ. ಕ್ರಯ ಪತ್ರಕ್ಕೆ ಸಾಕ್ಷಿ ಹಾಕಿದಂತಹ ಸಾಕ್ಷಿದಾರರು ಅಕ್ರಮವಾಗಿ ಮಾಡಿಕೊಂಡ ಕರಾರು ಪತ್ರಕ್ಕೆ ಸಹಿ ಹಾಕಿರುವುದಿಲ್ಲ ಎಂದರೆ ಸಾಕ್ಷಿ ಸುಮ್ಮನಿರುತ್ತಾರೆ.

8. ಕ್ರಯ ಪತ್ರವನ್ನು 27-01-2023 ರಂದು ಮಾಡಿಕೊಳ್ಳಲಾಗಿರುತ್ತದೆ. ಅದೇ ದಿನ ಕ್ರಯ ಪತ್ರ ಮಾಡಿಕೊಳ್ಳಲಾಗಿರುತ್ತದೆ. ಕ್ರಯ ಪತ್ರವನ್ನು ಯಾವಾಗ ನೋಂದಣಿ ಮಾಡಿರುತ್ತಾರೆ ಎಂದು ನಾನು ನೋಡಿರುವುದಿಲ್ಲ. ಕ್ರಯ ಪತ್ರ ನೋಂದಣಿ ಮಾಡುವಾಗ ನಾನು ಉಪನೋಂದಾಣಾಧಿಕಾರಿಯವರ ಕಚೇರಿಯಲ್ಲಿದ್ದೆ. ಕರಾರು ಅದೇ ದಿನ ಆಗಿರುತ್ತದೆ. ಕರಾರು ಪತ್ರ ಮೊದಲು ಆಗಿರುತ್ತದೆ. ಆ ನಂತರ ಕ್ರಯ ಪತ್ರ ನೋಂದಣಿ ಆಗಿರುತ್ತದೆ. ಕ್ರಯ ಪತ್ರಕ್ಕೆ ಸಹಿ ಮಾಡಲು ನನಗೆ ಸಮಯ ಇರಲಿಲ್ಲ, ಹಾಗಾಗಿ ಹೊರಟಿರುತ್ತೇನೆ. ಕರಾರು ಪತ್ರದಲ್ಲಿ ಮುಂದೆ ಆಗುವಂತಹ ಕ್ರಮ ಬದ್ಧವಾದಕ್ರಯ ಪತ್ರದ ಬಗ್ಗೆ ನಮೂದು ಇದೆಯಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ.

9. ಒಂದು ವ್ಯವಹಾರದ ಬಗ್ಗೆ ಎರಡು ದಾಖಲಾತಿಗಳು ಮಾಡುವ ಕ್ರಮ ಇಲ್ಲ ಎಂದರೆ ಸಾಕ್ಷಿ ಸುಮ್ಮನಿರುತ್ತಾರೆ. ವಂಚನೆ ಮಾಡುವವರು ಈ ರೀತಿ ಎರಡುದಾಖಲೆಗಳನ್ನು ಮಾಡುತ್ತಾರೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ.

ಈ ಸಂದರ್ಭದಲ್ಲಿ ಆರೋಪಿ ಪರ ವಕೀಲರು ಮುಂದುವರಿದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಕೋರಿಕೆಯ ಮೇರೆಗೆ ಮುಂದೂಡಲಾಯಿತು.

ಓ.ಹೇ.ಕೇ.ಸ.ಇದೆ

ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಗಿದೆ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಕುಂದಾಪುರ